ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ದಕ್ಷಿಣ ಕನ್ನಡ, ಮಂಗಳೂರು.

## ಸೆಷನ್ಸ್ ಕೇಸ್ ನಂಬ್ರ 34/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ರೋಹಿತ್ ಕೋಟ್ಯಾನ್ | ಫ್ರಾಸಾಃ 2 |
| ಗಂಡನ ಹೆಸರು | : | ಸೀತಾರಾಮ್ ಕೋಟ್ಯಾನ್ | ಚಾಸಾಃ 4 |
| ಪ್ರಾಯ | : | 37 ವರ್ಷ | **ದಿನಾಂಕಃ 08.12.2021** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಸೆಂಟರಿಂಗ್ ಕೆಲಸ | |
| ವಾಸಸ್ಥಳ | : | ಗುರುಪುರ, ಮಂಗಳೂರು. | |

ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ

2008 ರಲ್ಲಿ ನಾನು ಮಂಗಳೂರಿನಲ್ಲಿರುವ H.D.F.C. Bank ನಲ್ಲಿ ಸೀಜರ್ ಆಗಿ ಕೆಲಸ ಮಾಡುತ್ತಿದ್ದೆನು. ಚಾಸಾ.3 ಸಂತೋಷ್ ಹಾಗೂ ಚಾಸಾ.1 ಅರುಣ್ ಕುಮಾರ್ ನನ್ನೊಂದಿಗೆ ಕೆಲಸ ಮಾಡುತ್ತಿದ್ದರು.

2. ದಿನಾಂಕ 03.10.2008 ರಂದು ನಾನು, ಚಾಸಾ.2 ಮತ್ತು ಚಾಸಾ.3 ಸೇರಿಕೊಂಡು ನಮ್ಮ ಬ್ಯಾಂಕಿನಿಂದ ಸಾಲ ಪಡೆದು ಖರೀದಿಸಿದಂತಹ ಒಂದು ವಾಹನವನ್ನು ಸೀಜ್ ಮಾಡಲು ಧಕ್ಕೆ ಕಡೆಗೆ ನಡೆದುಕೊಂಡು ಹೋಗುತ್ತಿದ್ದೆವು. ಆಗ ಬೆಳಿಗ್ಗೆ 5.30 ಗಂಟೆಗೆ ರಸ್ತೆಯಲ್ಲಿ ಇಬ್ಬರು ಸಮವಸ್ತ್ರದಲ್ಲಿ ಇದ್ದಂತಹ ಪೊಲೀಸರು ನಿಲ್ಲಿಸಿದ್ದರು. ಅವರಿಬ್ಬರೂ ನಮಗೆ ಸಾಕ್ಷಿದಾರರಾಗಿ ಬರಲು ತಿಳಿಸಿದ್ದರು. ಪೊಲೀಸರು ನಮ್ಮನ್ನು ಸಿ.ಸಿ.ಬಿ. ಕಛೇರಿಗೆ ಕರೆದುಕೊಂಡು ಹೋಗಿದ್ದರು. ಪೊಲೀಸರು ನಮಗೆ ಭಯೋತ್ಪಾದನೆ ಚಟುವಟಿಕೆ ನಡೆಯುತ್ತಿದ್ದ ಕುರಿತು ಮಾಹಿತಿ ನೀಡಿದ್ದಾರೆ.

3. ಪೊಲೀಸರು ನನ್ನನ್ನು, ಚಾಸಾ.2 ಮತ್ತು ಚಾಸಾ.3 ಇವರನ್ನು ಉಳ್ಳಾಲದ ಮುಕ್ಕಚೇರಿಗೆ ಬೆಳಿಗ್ಗೆ 6.45 ಗಂಟೆಗೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಒಂದು ಮಸೀದಿ ಇತ್ತು. ಮಸೀದಿಯ ಹಿಂದೆ ಒಂದು ಮನೆ ಇತ್ತು. ಪೊಲೀಸರು ಆ ಮನೆಯನ್ನು ವಾಚ್ ಮಾಡುತ್ತಿದ್ದರು. ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ಆ ಮನೆಯಿಂದ ಗಡ್ಡ ಧರಿಸಿದಂತಹ ಒಬ್ಬ ವಕ್ತಿ ಹೊರಗೆ ಬಂದಿದ್ದನು. ಆತ ಪೊಲೀಸರನ್ನು ನೋಡಿದ ತಕ್ಷಣ ಮತ್ತೆ ಮನೆಯ ಒಳಗಡೆ ಹೋಗಿ ಬಾಗಿಲನ್ನು ಹಾಕಿಕೊಂಡಿದ್ದಾನೆ. ಪೊಲೀಸರು ಆ ಮನೆಯ ಬಾಗಿಲು ಬಡಿದಿದ್ದಾರೆ. ಆಗ ಮೇಲೆ ಹೇಳಿದ ಗಡ್ಡ ಧರಿಸಿದ ವ್ಯಕ್ತಿಯೇ ಬಾಗಿಲನ್ನು ತೆರೆದಿದ್ದಾನೆ. ಆತನ ಹೆಸರು ಮೊಹಮ್ಮದ್ ಅಲಿ ಎಂದು ತಿಳಿಸಿದ್ದಾನೆ. ಆತನ ಮಗ ಜಾವೇದ್ ಅಲಿ ಎಂಬಾತನು ಆ ಮನೆಯಲ್ಲಿ ಇದ್ದನು. ಪೊಲೀಸರು ಆ ಇಬ್ಬರನ್ನೂ ವಿಚಾರಣೆ ಮಾಡಿದ್ದಾರೆ.

4. ಪೊಲೀಸರು ಆ ಮನೆಯನ್ನು ಶೋಧನೆ ಮಾಡಿದ್ದಾರೆ. ಆ ಮನೆಯಲ್ಲಿ ಒಂದು ಕಂಪ್ಯೂಟರ್, ಕೆಲವು ಡಿ.ವಿ.ಡಿ. ಗಳು, ಪುಸ್ತಕಗಳು ದೊರೆತಿವೆ. ಪೊಲೀಸರು ಈ ಎಲ್ಲಾ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಅವುಗಳನ್ನು ವಶಕ್ಕೆ ಪಡೆಯುವಾಗ ಪೊಲೀಸರು ನನ್ನ ಸಮ್ಮುಖದಲ್ಲಿ ಮಹಜರು ಮಾಡಿದ್ದಾರೆ. ಸಾಕ್ಷಿ ನಿಶಾನೆ ಪಿ-1 ರಲ್ಲಿರುವ ಮಹಜರನ್ನು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಈಗ ನನಗೆ ಆ ಡಿ.ವಿ.ಡಿ. ಗಳನ್ನು ಗುರುತಿಸಲು ಆಗುವುದಿಲ್ಲ.

5. ನಂತರ ಪೊಲೀಸರು ಮೇಲೆ ಹೇಳಿದ ಮೊಹಮ್ಮದ್ ಅಲಿ ಮತ್ತು ಜಾವೇದ್ ಅಲಿ ಇವರನ್ನು ತಮ್ಮ ವಶಕ್ಕೆಪಡೆದಿದ್ದಾರೆ. ಅವರಿಬ್ಬರೂ ಪೊಲೀಸರನ್ನು ಮತ್ತು ನಮ್ಮನ್ನು ತೊಕೊಟ್ಟಿನಲ್ಲಿರುವ ಚೆಂಬುಗುಡ್ಡೆಯಲ್ಲಿರುವ ಒಂದು ಮನೆಗೆ ಕರೆದುಕೊಂಡು

ಹೋಗಿದ್ದರು. ಅಲ್ಲಿ ನೆಲಮಹಡಿಯಲ್ಲಿ ಮತ್ತು ಮೊದಲನೇ ಮಹಡಿಯಲ್ಲಿ ಮನೆಗಳು ಇದ್ದವು. ಅಲ್ಲಿ ಬೆಳಿಗ್ಗೆ ಹೋಗಿದ್ದೆವು. ಆದರೆ ಸಮಯ ನೆನಪಿಲ್ಲ. ಮೊದಲನೇ ಮಹಡಿಯಲ್ಲಿದ್ದ ಮನೆಗೆ ಬೀಗ ಹಾಕಲಾಗಿತ್ತು. ಆಗ ಆ ಮನೆಗೆ ಒಬ್ಬ ವ್ಯಕ್ತಿ ಬಂದಿದ್ದನು. ಆತನ ಹೆಸರು ಸುರೇಂದ್ರ ಎಂದು ಇತ್ತು. ಆತನನ್ನು ಪೊಲೀಸರು ವಿಚಾರಣೆ ಮಾಡಿದ್ದಾರೆ. ಆತ ಆ ಮನೆಗೆ ಬಾಡಿಗೆ ವಸೂಲು ಮಾಡಲು ಬಂದಿದ್ದನು. ಆ ಮನೆಯ ಕೀ ಸುರೇಂದ್ರ ಈತನ ಹತ್ತಿರ ಇರಲಿಲ್ಲ. ಪೊಲೀಸರು ಆ ಮನೆಯ ಬೀಗವನ್ನು ಒಡೆದು ಮನೆಯನ್ನು ಶೋಧನೆ ಮಾಡಿದ್ದಾರೆ. ಆ ಮನೆಯಲ್ಲಿ ಒಟ್ಟು 10 ಮೊಬೈಲ್ ಗಳು ಇದ್ದವು. ಆ ಮನೆಯ ಒಂದು ಕಪಾಟಿನಲ್ಲಿ 5 ಬಾಂಬ್‌ಗಳು ಇದ್ದವು. ಅವುಗಳಲ್ಲಿ 4 ಕಪ್ಪು ಬಣ್ಣದ ಹಾಗೂ ಇನ್ನೊಂದು ಹಳದಿ ಬಣ್ಣದ್ದು ಇದ್ದವು. ಅಲ್ಲಿ ಒಂದು ಡೈರಿ ಸಿಕ್ಕಿದೆ. ಪೊಲೀಸರು ಆ ಎಲ್ಲಾ ವಸ್ತುಗಳನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಆ ಸಮಯದಲ್ಲಿ ಪೊಲೀಸರು ನಮ್ಮ ಸಮ್ಮುಖದಲ್ಲಿ ಮಹಜರು ಮಾಡಿದ್ದಾರೆ. ಸಾಕ್ಷಿ ನಿಶಾನೆ ಪಿ-2 ರಲ್ಲಿರುವ ಮಹಜರನ್ನು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುಮಾ-5 ರಿಂದ ಮುಮಾ-14 ರಲ್ಲಿರುವ ಮೊಬೈಲ್ ಗಳನ್ನು ಗುರುತಿಸಿದ್ದಾರೆ. (ನ್ಯಾಯಾಲಯದ ಮುಂದೆ ಬಾಂಬ್ ಗಳು ಇರುವುದಿಲ್ಲ. ಕಾರಣ ಸಾಕ್ಷಿಗೆ ಅವುಗಳನ್ನು ತೋರಿಸಿಲ್ಲ.)

6. ಆ ನಂತರ ಮೊಹಮ್ಮದ್ ಅಲಿ ಮತ್ತು ಜಾವೇದ್ ಅಲಿ ಸೇರಿಕೊಂಡು ಪೊಲೀಸರನ್ನು ಪಾಂಡೇಶ್ವರದಲ್ಲಿರುವ ಮುದಸ್ಸಿರ್ ಯಾಸೀರ್ ಈತನ ಮನೆಗೆ ಕರೆದುಕೊಂಡು ಹೋಗುತ್ತಿದ್ದರು. ನಾನು, ಚಾಸಾ.2 ಮತ್ತು ಚಾಸಾ.3 ಪೊಲೀಸರ ವಾಹನದಿಂದ ಸ್ಟೇಟ್ ಬ್ಯಾಂಕ್ ಹತ್ತಿರ ಇಳಿದುಕೊಂಡು ಮನೆಗೆ ಹೋಗಿದ್ದೇವೆ.

(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ.)

<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>

7. ನಿಶಾನೆ ಪಿ-1 ರಲ್ಲಿರುವ ಮನೆಯಲ್ಲಿ ಪೊಲೀಸರು ಒಟ್ಟು 3 ಪುಸ್ತಕಗಳು ಹಾಗೂ ಒಟ್ಟು 27 ಡಿ.ವಿ.ಡಿ. ಗಳನ್ನು ವಶಪಡಿಸಿಕೊಂಡಿದ್ದಾರೆ ಅಂದರೆ ಸರಿ. ಆ ಡಿ.ವಿ.ಡಿ. ಗಳು ಮುಮಾ1 ರಿಂದ ಮುಮಾ-4, ಮುಮಾ-15 ರಿಂದ ಮುಮಾ-21 ರಲ್ಲಿ ಇವೆ ಎಂದು ಸಾಕ್ಷಿ ಗುರುತಿಸಿದ್ದಾರೆ. ಮೇಲೆ ಹೇಳಿದ ಎಲ್ಲಾ ಮುದ್ದೆಮಾಲುಗಳನ್ನು ಭಯೋತ್ಪಾದಕ ಚಟುವಟಿಕೆಗಾಗಿ ಉಪಯೋಗಿಸಲಾಗುತ್ತಿತ್ತು ಅಂದರೆ ನನಗೆ ಗೊತ್ತಿರುವುದಿಲ್ಲ. ಡಿ.ವಿ.ಡಿ. ಮತ್ತು ಪುಸ್ತಕಗಳಲ್ಲಿ ಭಯೋತ್ಪಾದಕ ಕೃತ್ಯಗಳ ಉಲ್ಲೇಖ ಇತ್ತು ಅಂದರೆ ನನಗೆ ಗೊತ್ತಿರುವುದಿಲ್ಲ. ನಿಪಿ-2 ರಲ್ಲಿರುವ ಮಹಜರನ್ನು ಮಧ್ಯಾಹ್ನ 12.30 ರಿಂದ 2.00 ಗಂಟೆಯ ಅವಧಿಯಲ್ಲಿ ತಯಾರಿಸಲಾಗಿದೆ ಅಂದರೆ ಸರಿ.

<u>ಪಾಟೀ ಸವಾಲುಃ 10 ನೇ ಆರೋಪಿ ಪರ ವಕೀಲರಿಂದಃ</u>

8. ಪೊಲೀಸರು ನನ್ನನ್ನು ನೊಟೀಸು ಕೊಟ್ಟು ಪಂಚನನ್ನಾಗಿ ಕರೆಸಿಲ್ಲ. ನಾನು ನಿಪಿ-1 ಮತ್ತು ನಿಪಿ-2 ರಲ್ಲಿ ಕಾಣಿಸಿದಂತಹ ಮನೆಗಳಿಗೆ ಹೋಗಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಸಮ್ಮುಖದಲ್ಲಿ ಪೊಲೀಸರು ಆ ಮನೆಗಳಿಂದ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ನನ್ನ ಸಮ್ಮುಖದಲ್ಲಿ ನಿಪಿ-1 ಮತ್ತು ನಿಪಿ-2 ನ್ನು ಬರೆದಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಮಹಜರುಗಳ ಮೇಲೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ. ನಾನು ಮುಖ್ಯವಿಚಾರಣೆಯಲ್ಲಿ

ಸುಳ್ಳು ಸಂಗತಿಗಳನ್ನು ಹೇಳಿದ್ದೇನೆ ಅಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದ.ಕ., ಮಂಗಳೂರು.